ಅವಳು ಅಳಲಾರಂಭಿಸಿದಳು.

ಲಕ್ಷ್ಮಿ ಮಗುವನ್ನು ಪಡೆದು ಎದೆಗವಚಿಕೊಂಡು ಹೇಳಿದಳು, 'ಮಗಳೇ ನೀನು ಅಳಬೇಡ, ವಿಷಯವೇನೆಂದು ಹೇಳು...'

ಬಿಕ್ಕಳಿಕೆಯ ನಡುವೆ ಮಾತು ಹೊರಡಲಿಲ್ಲ... ಕ್ರಮವಾಗಿ ಅವಳು ಎಲ್ಲವನ್ನು ಅಮ್ಮನಲ್ಲಿ ಹೇಳಿದಳು. ಗಂಡನೊಡನೆ ಸಿಟ್ಟುಮಾಡಿ ಬಂದವಳವಳು. ಒತ್ತೆಯಿಡುವುದಕ್ಕಾಗಿ ಅವಳ ಹಾರವನ್ನು ಅವನು ಕೇಳಿದನಂತೆ. ಅವಳು ಅದಕ್ಕೆ ಸಮ್ಮತಿಸಲಿಲ್ಲ. ಕೋಪಿಸಿಕೊಂಡ ಗಂಡ ಅವಳನ್ನು ಕ್ರೂರವಾಗಿ ಮರ್ದಿಸಿದ. ಇದುವೇ ಕಾರಣದಿಂದ ಅವಳು ಹೊರಟು ಬಂದಳು.

ಗಂಡನ ತಾಯಿ, ಸಹೋದರಿಯರೂ ಮನೆಯಲ್ಲಿದ್ದಾರೆ. ಅವರ್‍ಯಾರಿಗೂ ಕುಂಜಿಯಲ್ಲಿ ಪ್ರೀತಿಯಿಲ್ಲ. ಅವಳ ಕಷ್ಟಗಳಿಗೆ ಗಂಡ ಸ್ಪಂದಿಸುವುದೆಂದಿಲ್ಲ.

'ಅಮ್ಮ ನನ್ನನ್ನು ಕೊಂದರೂ ಪರವಾಗಿಲ್ಲ ನಾನಿನ್ನು ಅಲ್ಲಿಗೆ ಹೋಗುವುದಿಲ್ಲ...'

'ಅಪ್ಪ ಹೇಳಿದಂತೆ ಎಲ್ಲವನ್ನು ಮಾಡಬಹುದು...'

ನಾಣು ಸಂಜೆಗೆ ಮರಳಿಬಂದಾಗ ಮಗಳ ಪರಿಸ್ಥಿತಿ ತಿಳಿಯಿತು. ಅವನು ಏನನ್ನೂ ಹೇಳಲಿಲ್ಲ. ಮೌನವಾಗಿ ಒಂದೆಡೆ ತಲೆತಗ್ಗಿಸಿ ಕುಳಿತುದು ಮಾತ್ರ.

ಆ ಸಿಟ್ಟು ಕೊನೆಗೊಳ್ಳಲಿಲ್ಲ. ಆ ಮದುವೆ ಹಾಗೆ ವಿಫಲವಾಯಿತು. ಕುಂಜಿ ಮತ್ತು ಮಗುವಿನ ಪೋಷಣೆಯ ಭಾರವೂ ನಾಣುವಿನದಾಯಿತು.

ಪತನಗಳ ಕತೆಯೇ ಮುಂದುವರಿದುದು. ಒಂದೇ ವರ್ಷದಲ್ಲಿ ಅವರ ಸ್ಥಿತಿ ಅತ್ಯಂತ ದಯನೀಯಾವಸ್ಥೆಗೆ ತಲುಪಿತು. ಸರಿಯಾದ ಸಮಯಕ್ಕೆ ಹುಲ್ಲು ಹೊದಿಸದೆಯಿದ್ದುದರಿಂದ ಮನೆ ಸೋರಿ ಅಸ್ತವ್ಯಸ್ತವಾಯಿತು. ಮಕ್ಕಳು ಸಣಕಲಾಗಿ ನರಪೇತಲಗಳಾದವು. ನಾಣುವನ್ನು ನೋಡಿದರೆ ಗುರುತು ಹತ್ತದಂತಾಯಿತು. ಚಲಿಸುತ್ತಿರುವ ಅಸ್ಥಿಪಂಜರದಂತೆ ಕಾಣಿಸುತ್ತಿದ್ದ.

ಕೆಲವು ದಿನಗಳಿಂದ ನಾಣುವಿಗೆ ಕೆಲಸವಿರಲಿಲ್ಲ. ಆ ದಿನಗಳಲ್ಲಿ ಮನೆ ಮಂದಿಯೆಲ್ಲರೂ ಉಪವಾಸ.

ಆದರೂ ಬಿಲ್ವಕಟ್ಟೆಯಲ್ಲಿ ಬೆಳಿಗ್ಗೆ ಮತ್ತು ಸಂಜೆ ದೀಪ ಉರಿಯುತ್ತಿತ್ತು...

* * *

ಮಕರ ತಿಂಗಳು ಬಂತು. ಮರಗಟ್ಟಿಸುವ ಮಂಜು. ಗಾಢಚಳಿಯ ರಾತ್ರಿಗಳು.

ನಾಣುವಿನ ಮನೆಯಲ್ಲಿ ಬೆಂಕಿಯುರಿಸಿ ಎರಡು ದಿನಗಳಾದವು. ವಾತರೋಗಿಯಾದ ನಾಣು ಹಾಸಿಗೆ ಹಿಡಿದಿದ್ದಾನೆ. ಹಸಿವು ತಾಳದೆ ಮಕ್ಕಳು ಚೀರುತ್ತಿವೆ. ಕುಂಜಿಯ ಪುಟ್ಟ ಮಗ ದಣಿದು ನಿದ್ರಿಸಿದ್ದಾನೆ.

ಸಿಗುವಲ್ಲಿಂದೆಲ್ಲ ಅವರು ಸಾಲ ತಂದು ದಿನ ಕಳೆದರು. ಕುಂಜಿಯ ಚಿನ್ನದ ಸರ ಬ್ಯಾಂಕಿನಲ್ಲಿ ಒತ್ತೆಯಿಡುವುದಕ್ಕೋ, ಮಾರುವುದಕ್ಕೋ... ಅವರ ಕೈಯಲ್ಲಿ ಬೇರೆ ಯಾವುದೇ ವಸ್ತುಗಳಿರಲಿಲ್ಲ.

ಬಿಲ್ವ ಕಟ್ಟೆಯಲ್ಲಿ ದೀಪವನ್ನು ಈಗಲೂ ಉರಿಸಲಾಗುತ್ತಿದೆ. ದೀಪಕ್ಕೆ ಬೇಕಾದ ಎಣ್ಣೆ ತಂದ ಬಳಿಕವೇ ಅವರು ಅಕ್ಕಿಯ ವಿಷಯವನ್ನು ಯೋಚಿಸುತ್ತಿದ್ದುದು.

ನಾಣುವಿಗೆ ಬೇಕಾದ ಚಿಕಿತ್ಸೆ ಕೊಡಿಸಬೇಕೆಂದು ಲಕ್ಷ್ಮಿಗೂ, ಮಗಳಿಗೂ ಆಸೆಯಿದೆ. ಆದರೆ ಹಣವಿಲ್ಲ. ಒಂದು ಸಂದರ್ಭದಲ್ಲಿ ಲಕ್ಷ್ಮಿ ಆ ವಿಷಯವನ್ನು ಸೂಚಿಸಿದ್ದಳು ಕೂಡಾ...

ಆಗ ನಾಣು ಹೇಳಿದ:

'ಗಂಜಿ ನೀರು ಕುಡಿಯುವುದಕ್ಕೆ ದಾರಿಯಿಲ್ಲದಿರುವಾಗ ಇನ್ನು ಚಿಕಿತ್ಸೆಯ ಮಾತುಬೇಡ. ನೀವು ಬಿಲ್ವಕಟ್ಟೆಯಲ್ಲಿ ನಿಲ್ಲಿಸದೆ ದೀಪ ಉರಿಸಿದರೆ ಸಾಕು. ಎಲ್ಲವೂ ಸರಿಯಾದೀತು...'

ಕಳೆದ ಎರಡು ದಿನಗಳಲ್ಲಿ ಆ ದೀಪ ಉರಿಯಲಿಲ್ಲ. ಅದನ್ನು ನೆನಪಿಸಿಕೊಂಡರೆ ನಾಣುವಿನ ಹೃದಯ ಕುಸಿಯುತ್ತಿದೆ...

ಲಕ್ಷ್ಮಿ ಸಮಾಧಾನ ಹೇಳುವಳು:

'ಇದ್ದು ನಾವು ಅಹಂಕಾರ ತೋರುತ್ತಿಲ್ಲವಲ್ಲವೇ... ಮಕ್ಕಳು ಅಕ್ಕಿ ಬೆಂದ ನೀರು ಕುಡಿದು ಎರಡು ದಿನಗಳಾದುವಲ್ಲವೇ?'

ಜಗಲಿಯಲ್ಲಿ ಸೊಂಟದಲ್ಲಿ ಕೈಯೂರಿ ಚಿಂತಾಮಗ್ನಳಾಗಿ ನಿಂತಿರುವ ಅಮ್ಮನಲ್ಲಿ ಮಗಳು ಕೇಳಿದಳು, 'ಅಮ್ಮ, ಎಷ್ಟು ದಿನ ಮಕ್ಕಳನ್ನು ಹೀಗೆ ಉಪವಾಸ ಹಾಕುವುದು?'

ಲಕ್ಷ್ಮಿ ಏನನ್ನೂ ಹೇಳಲಿಲ್ಲ. ಅವಳಿಗೂ ಕೇಳುವುದಕ್ಕಿರುವುದೂ ಅದುವೇ.